(*b*) The matter has been referred to the Pay Commission for consideration.

(*c*) There is no provision for selection of constables to the post of S. Is. But there is provision for promotion of H. Cs. to the post of P.S.Is. by selection. 66 2/3 per cent of the posts of P.S.Is. are to be filled by direct recruitment of graduates. The P. Cs. and Hcs who have requisite qualifications can apply for the posts of P.S.Is.by direct recruitment.

RESOLUTION BY THE CHIEF MINISTER

re : Incident at Allahabad High Court when the Prime Minister appeared to give evidence in the Election Petitions

† ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನಾನು ಈ ಸಭೆಯ ಮುಂದೆ ನಿಂತಿರತಕ್ಕದ್ದು ಒಂದು ವಿಷೇಷ ನಿರ್ಣಯವನ್ನು ಈ ಸಭೆಯ ಮುಂದೆ ಮುಂಡಿಸುವುದಕ್ಕೆ, ಇದಕ್ಕೆ ಮಾನ್ಯ ಸದನದ ಹಾಗೂ ಅಧ್ಯಕ್ಷರ ಅಪ್ಪಣೆಯನ್ನು ಕೇಳುತ್ತೇನೆ. ಈ ನಿರ್ಣಯದಲ್ಲಿ ನಿನ್ನೆ ನಡೆದಂತಹ ಘಟನೆ ಬಗ್ಗೆ ಎಂದರೆ ಭಾರತದ ಪ್ರಧಾನಮಂತ್ರಿಗಳು ಅವರ ಚುನಾವಣೆ ಸಂಬಂಧದ ಕೇಸಿನಲ್ಲಿ ಕೋರ್ಟಿನ ಬಳಿ ಬಂದಾಗ ನಿನ್ನೆ ಕೋರ್ಟಿನ ಆವರಣದಲ್ಲಿ ಒಬ್ಬರು ರಿವಾಲ್ವರನ್ನು ಹಾಗೂ ಅದಕ್ಕೆ ಬೇಕಾದ ಗುಂಡುಗಳನ್ನು ಇಟ್ಟುಕೊಂಡಿದ್ದುದರ ಬಗ್ಗೆ ಇಂದು ಪತ್ರಿಕೆಗಳಲ್ಲಿ ವಿವರಗಳು ಆಗಲೇ ಬಂದಿವೆ. ನಿನ್ನೆ ದಿವಸ ಪಾರ್ಲಿಮೆಂಟಿನಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡಿ ಇಡೀ ನಮ್ಮ ದೇಶದಲ್ಲೇ ಇಂತಹ ಹಿಂಸಾತ್ಮಕವಾದ ಕೃತ್ಯಗಳನ್ನು ಹತ್ತಿಕ್ಕಬೇಕೆಂದು ಹೇಳಿ ಇದರ ಬಗ್ಗೆ ಅಲ್ಲಿ ಪ್ರಬಲವಾದ ಟೀಕೆಗಳನ್ನು ಮಾಡಿದ್ದಾರೆ. ಇದೇ ಒಂದು ವಿಚಾರದಲ್ಲಿ ನಮ್ಮ ಸದನದಲ್ಲೂ ಕೂಡ ಒಂದು ನಿರ್ಣಯ ಮಾಡುವುದು ಸೂಕ್ತವಾಗಿದೆ ಎಂದು ಹೇಳಿ ನಾನು ಇಲ್ಲಿ ಒಂದು ನಿರ್ಣಯವನ್ನು ಸಭೆಯ ಮುಂದೆ ಮುಂಡಿಸುತ್ತೇನೆ. ನನ್ನ ನಿರ್ಣಯದಲ್ಲಿ ಈ ರೀತಿ ಇದೆ ;

"This House notes with great concern and alarm the incident that occurred in the Allahabad High Court when the Prime Minister appeared to give evidence in the election petition. The appearance of the Prime Minister before a *Court of Law once again establishes the mejesty of the Rule of Law in the country.*

Incident of this nature is indicative of the symptoms of the cult of violence which is rising its ugly head in certain parts of the country. All parties regardless of their political complexion condemn such blatant acts and attempts of political violence."

MADAM SPEAKER.—Resolution moved :

"That this House notes with great concern and alarm the incident that occurred in the Allahabad High Court when the Prime Minister appeared to give evidence in the election petition. The appearance of the Prime Minister before a *Court of Law once again establishes the majesty of the Rule of Law in the country.*

Incident of this nature is indicative of the symptoms of the cult of violence which is raising its ugly head in certain parts of the country. All parties regardless of their political complexion condemn such blatant acts and attempts of political violence."

† ಶ್ರೀ ಡಿ. ದೇವರಾಜ ಅರಸ್.—ಈ ನಿರ್ಣಯದಲ್ಲಿ ನಾವು ಹೇಳಿರತಕ್ಕದ್ದು ಒಂದು ದೇಶದ ಪ್ರಧಾನ ಮಂತ್ರಿಯಾದವರು ಅವರು ಎಷ್ಟೇ ದೊಡ್ಡ ಸ್ಥಾನದಲ್ಲಿದ್ದರೂ ನಮಗೆ ಕೊಟ್ಟಿರತಕ್ಕ ರಾಜ್ಯಾಂಗಬದ್ಧವಾದ ಸೌಕರ್ಯಗಳನ್ನು ಯಾರೂ ಅಡ್ಡಿಪಡಿಸುವಹಾಗಿಲ್ಲ. ಇದು ನಾವು ನಮ್ಮ ದೇಶದಲ್ಲಿ ಹಾಕಿರುವ ಸೂತ್ರ. ಇದು ಬಹು ಗಹನವಾದುದು. ಇವರು ನುಮಾರು ಅರವತ್ತು ಕೋಟಿ ಜನರ ಪ್ರಧಾನ ಮಂತ್ರಿಗಳು. ಇಂತಹ ಪ್ರಧಾನಿಯವರ ಬಗ್ಗೆ ನಡೆದಿರುವ ಘಟನೆ ನೋಡಿದರೆ ಯಾರಾದರೂ ಇದಕ್ಕೆ ತಲೆಬಾಗಬೇಕಾಗುತ್ತದೆ.

3-00 P.M.

ಕಾನೂನು ಚೌಕಟ್ಟಿನೊಳಗೆ ನಾವು ಕೆಲಸ ಮಾಡಬೇಕಾಗುತ್ತದೆ. ಇದು ನಮ್ಮ ದೇಶದಲ್ಲಿ ನಾವು ಹಾಕಿರತಕ್ಕ ಒಂದು ಮಹಾಬುನಾದಿ. ನಮ್ಮಲ್ಲಿ ಹಿಂದಿನ ಕಾಲದಿಂದಲೂ ಬಂದಿರತಕ್ಕ ಒಂದು ಸೂತ್ರ ಇದೆ. ದೊಡ್ಡವರು, ಋಷಿಗಳು ನಮಗೆ ಕೊಟ್ಟಿರತಕ್ಕ ಸೂತ್ರವದು. ಅದೇನೆಂದರೆ, 'ಧರ್ಮೋ ರಕ್ಷತಿ ರಕ್ಷಿತಃ' ಯಾರು ಧರ್ಮವನ್ನು ಕಾಪಾಡುತ್ತಾರೆ ಅವರನ್ನು ಧರ್ಮ ಕಾಪಾಡುತ್ತದೆ ಎನ್ನುವ ಸೂತ್ರ ನಮ್ಮ ದೇಶದಲ್ಲಿ ಬಹಳ ಕಾಲದಿಂದಲೂ ಬಂದಿರತಕ್ಕದ್ದು. ಅದನ್ನೇ ಈಗ ನಾನು ರೂಲ್ ಆಫ್ ಲಾ ಎಂದು ಹೇಳುತ್ತೇನೆ. ರೂಲ್ ಆಫ್ ಲಾ ಎನ್ನತಕ್ಕ ಸೂತ್ರವನ್ನು ನಾವು ರಕ್ಷಣೆ ಮಾಡಬೇಕು; ಆಗ ಅದು ನಮ್ಮನ್ನು ರಕ್ಷಿಸುತ್ತದೆ. ಈ ಕಾರಣದಿಂದಲೇ ಇದಕ್ಕೆ ನಾವು ಇಷ್ಟು ಮಹತ್ವವಾದ ಸ್ಥಾನವನ್ನು ಈ ದೇಶದಲ್ಲಿ ಕಲ್ಪಿಸಿದ್ದೇವೆ. ಪ್ರಜಾಸತ್ತೆಯನ್ನು ದೇಶದಲ್ಲಿ ಸ್ಥಾಪನೆ ಮಾಡಿದ್ದೇವೆ; ಅದು 25 ವರ್ಷಗಳಿಂದಲೂ ಬೆಳೆಯುತ್ತಾ ಬಂದಿದೆ; ಅದು ಹೆಚ್ಚು ಬೆಳೆಯುತ್ತಾ ಇದೆ. ಭವ್ಯವಾದ ಬೇರುಗಳನ್ನು ಈ ದೇಶದ ನೆಲದಲ್ಲಿ ಪ್ರಜಾಸತ್ತೆ ಬಿಡಬೇಕಾಗಿದೆ; ಅದು ದೊಡ್ಡ ವೃಕ್ಷವಾಗಿ ಬೆಳೆಯಬೇಕಾಗಿದೆ. ನಾವುಗಳು ಪ್ರಜಾಸತ್ತೆ ಬೆಳೆಯಬೇಕೆಂದು ಹೇಳುವಾಗ, ಅದು ಉಳಿಯಬೇಕೆಂದು ಹೇಳುವಾಗಹಿಂಸೆಗೆ, ದಾರ್ಜನ್ಯಕ್ಕೆ ಅಲ್ಲಿ ಸ್ಥಾನ ಇರುವುದಿಲ್ಲ. ಪ್ರಜಾಸತ್ತೆ ಉಳಿಯುವುದು ವಾದ ವಿವಾದದಿಂದ, ಇನ್ನೊಬ್ಬರ ಮನಸ್ಸನ್ನು ಒಲಿಸುವುದಕ್ಕೆ ಅಥವಾ ಒಪ್ಪಿಸುವುದಕ್ಕೆ ಪ್ರಯತ್ನ ಮಾಡುವುದರಿಂದ ಹಾಗೂ ಬಹುಮತದಿಂದ ಈ ಸೂತ್ರಗಳ ಆಧಾರದ ಮೇಲೆ ಪ್ರಜಾಸತ್ತೆ ನಡೆಯತಕ್ಕದ್ದು. ಈಗ ನಮ್ಮ ದೇಶದಲ್ಲಿ ವಾತಾವರಣ ಯಾವ ರೀತಿ ಬೆಳೆಯುತ್ತಾ ಇದೆ ಎಂದರೆ, ನಾವು ಪ್ರಜಾಸತ್ತೆ ಉಳಿಯಬೇಕು ಎಂದು ಹೇಳುತ್ತೇವೆ, ಇದರಲ್ಲಿ ಎಲ್ಲರೂ ಎಂದು ಹೇಳುವುದಿಲ್ಲ. ಆದರೆ ಕೃತಿಯಲ್ಲಿ, ಮಾತಿನಲ್ಲಿ ಪ್ರಜಾಸತ್ತೆಯ ಅಳಿವಿಗೆ ಕಾರಣೀಭೂತ ರಾಗುವ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದೇವೆ. ಯಾವುದೇ ಅಭಿಪ್ರಾಯ ಭೇದವಿದ್ದರೂ, ಅದು ಮಾತಿನಿಂದಾಗಲೀ- ಅಥವಾ ಪರಸ್ಪರ ಚರ್ಚೆಯಿಂದಾಗಲೀ; ಅಥವಾ ಅಂತಿಮವಾಗಿ ಬಹುಮತದಿಂದರಾದರೂ ತೀರ್ಮಾನವಾಗಲೇಬೇಕು. ಹಿಂಸೆ ಮುಖೇನ, ಅಥವಾ ದಾರ್ಜನ್ಯದ ಮುಖೇನ ತೀರ್ಮಾನವಾಗುವುದಾದರೆ, ಅದು ಪ್ರಜಾಸತ್ತೆಯಲ್ಲ. ಹಾಗೂ ಇದು ನಾಗರೀಕ ಸಮಾಜದ ಲಕ್ಷಣವಲ್ಲ. ಇದು ನಾಗರೀಕ ಸಮಾಜದ ಲಕ್ಷಣವಲ್ಲ ಎಂದು ಹೇಳಿದ ಮೇಲೆ, ಅನಾಗರಿಕ ಸಮಾಜ ಇದ್ದಂಥ ಕಾಲದಲ್ಲಿ ಅಭಿಪ್ರಾಯ ಭೇದ ಬಂದಾಗ ಅದಕ್ಕೆ ಮಾರ್ಗ ಇದ್ದುದೆಂದರೆ, ಎದುರಾಳಿಯನ್ನು ಕೊಲೆ ಮಾಡುವುದು ಅಥವಾ ಹಿಂಸೆ ಮಾಡುವುದು. ಮಾನ್ಯ ಸದಸ್ಯರಾದ ಶ್ರೀ ಸಿ. ಬೈರೇಗೌಡ ಅವರು ಏತಕ್ಕೆ ಹಾಗೆ ನಗುತ್ತಿದ್ದಾರೆ ಎಂಬುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಸಿ. ಬೈರೇಗೌಡ.—ನಗುನಗುತ್ತಾ, ಸಂತೋಷದಿಂದ ತಮ್ಮ ಅಭಿಪ್ರಾಯವನ್ನು ಸ್ವಾಗತ ಮಾಡುತ್ತಿದ್ದೇನೆ.

ಶ್ರೀ ಡಿ. ದೇವರಾಜ ಅರಸ್.—ತಾವು ಕಮ್ಯೂನಿಸ್ಟ್ ಮಾರ್ಕಿಸ್ಟ್ ಪಕ್ಷದವರು ಎಂದು ನನಗೆ ಗೊತ್ತಿದೆ. ನಾನು ಹೇಳತಕ್ಕ ತತ್ವಗಳಲ್ಲಿ ತಮಗೆ ವಿಶ್ವಾಸ ಇದೆಯೋ ಏನೋ ನನಗೆ ಗೊತ್ತಿಲ್ಲ. ಆದುದರಿಂದ, ತಮಗೆ ಹಿಂಸೆ ಮಾರ್ಗದಲ್ಲಿ ನಂಬಿಕೆ ಇದ್ದರೆ, ಆ ಮಾತು ಬೇರೆ. ಅದು ತಮಗೆ ಪ್ರಚಾರ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದೆ. ಪ್ರಚಾರ ಮಾಡಿ ಜನರನ್ನು ಹೇಗೆ ಒಲಿಸಿಕೊಳ್ಳುತ್ತೀರಿ ಎನ್ನುವುದನ್ನು ನೋಡಿದ್ದೇವೆ; ಮುಂದೆಯೂ ಕಾದು ನೋಡುತ್ತೇವೆ. ಆದರೆ, ಬಹುತಃ

ಅವರು ಕೂಡ ಇದನ್ನು ಒಪ್ಪುತ್ತಾರೆ. ಪಾರ್ಲಮೆಂಟಿನಲ್ಲಿ ನಡೆದಂಥ ನಿರ್ಣಯಗಳನ್ನು ಪತ್ರಿಕೆಗಳಲ್ಲಿ ಓದಿ ನೋಡಿದಾಗ, ಶ್ರೀಮಾನ್ ಬೈರೇಗೌಡರು ಯಾವ ಪಕ್ಷಕ್ಕೆ ಸೇರಿದ್ದರೂ ಸರಿಯಾದ ಮಾರ್ಗದಲ್ಲಿ ಅವರು ಒಕ್ಕೊರಲಿನಿಂದ ಟೀಕಿಸಿದ್ದಾರೆ ಎಂದು ಪತ್ರಿಕೆಗಳಲ್ಲಿ ಓದಿದ್ದೇನೆ. ಅವರ ಮನೋಭಾವನೆಯನ್ನು ನಾವೆಲ್ಲಾ ಸ್ವಾಗತ ಮಾಡಿದ್ದೇವೆ. ಆದುದರಿಂದ, ಬೈರೇಗೌಡ ಅವರು ಏತಕ್ಕೆ ಹಾಗೆ ನಗುತ್ತಿದ್ದಾರೆ ಎಂದು ನನಗೆ ಅರ್ಥವಾಗುತ್ತಾ ಇಲ್ಲ.

ಶ್ರೀ ಸಿ. ಬೈರೇಗೌಡ.—ಈ ನಿರ್ಣಯಕ್ಕೆ ಎರಡಭಿಪ್ರಾಯವಿಲ್ಲವೆಂದು ಸ್ಪಷ್ಟಪಡಿಸುತ್ತಿದ್ದೇನೆ.

ಶ್ರೀ ಡಿ. ದೇವರಾಜ ಅರಸ್.—ಇನ್ನಾದರೂ, ನಮ್ಮ ಭಾವನೆಗಳನ್ನು ವ್ಯಕ್ತಪಡಿಸಬೇಕಾದರೆ ನಮಯವನ್ನು ಅರಿತು ಮಾಡುವುದು ಒಳ್ಳೆಯದೆಂದು ನನ್ನ ಸಮ್ಮ ವಿನಂತಿ. ಇಂತಹ ಒಂದು ಸನ್ನಿವೇಶ ಬೆಳೆಯುತ್ತಾ ಇರತಕ್ಕದ್ದು, ನಮಗೆ, ನಮ್ಮ ದೇಶಕ್ಕೆ ಪ್ರಜಾಸತ್ತೆಗೆ ಉಳಿಗೆ ಮತ್ತು ಬೆಳವಣಿಗೆಗೆ ಇದು ಪೂರಕವಾದಂಥ ಬೆಳವಣಿಗೆಯಲ್ಲ. ಇದನ್ನು ನಾವೆಲ್ಲರೂ ಖಂಡಿಸಲೇಬೇಕು. ರಾಜಕೀಯದಲ್ಲಿ ಪ್ರಧಾನ ಪಟ್ಟದಲ್ಲಿರುವವರಾಗಲೀ, ಶಾಸಕರಾಗಿ ಕೆಲಸ ಮಾಡುವವರಾಗಲೀ, ಶಾಸಕರಲ್ಲದೇ ರಾಜಕೀಯ ಪಕ್ಷಗಳಲ್ಲಿ ಕೆಲಸ ಮಾಡುವವರು ಲಕ್ಷಾಂತರ ಜನರು ಇದ್ದಾರೆ. ಯಾವುದೇ ಪಕ್ಷವಾಗಲೀ, ಎಷ್ಟೋ ವಿಚಾರಗಳಲ್ಲಿ ತೀವ್ರವಾದ ಅಭಿಪ್ರಾಯ ಭೇದಗಳಿರುತ್ತವೆ. ಇವೆಲ್ಲವನ್ನೂ ನಾವು ಪ್ರಜಾಸತ್ತೆಯಲ್ಲಿ ನಂಬಿಕೆ ಇದೆ ಎಂದು ಹೇಳಿದರೆ ಅದು, ಎಂಥಾ ಭೇದವಿದ್ದರೂ ಅದನ್ನು ನಾವು ಬಗೆಹರಿಸತಕ್ಕ ವಿಧಾನ-ಚರ್ಚೆ ಮುಖೇನ; ಅಥವಾ ಮನ ಒಲಸಿಕ್ಕೆ ಮಾರ್ಗದಲ್ಲಿ ಮನ ಒಲಯದಿದ್ದರೆ ಬಹುಮತದಿಂದ ತೀರ್ಮಾನವಾಗಬೇಕು. ಇದಕ್ಕಿಂತ ಬೇರೆ ಮಾರ್ಗ ಮಾನವ ಪ್ರಪಂಚದಲ್ಲಿ ಉತ್ತಮವಾದುದನ್ನು ರಾಜಕೀಯ ಚಾಕಟ್ಟಿನೊಳಗೆ ಅಥವಾ ರಾಜಕೀಯ ತತ್ವಗಳಲ್ಲಿ ಇದುವರೆಗೂ ಕಂಡುಹಿಡಿದಿಲ್ಲ. ಇನ್ನು ಮುಂದಾದರೂ ಬೇರೆ ತತ್ವವನ್ನು ಕಂಡುಹಿಡಿಯುತ್ತಾರೋ ಏನೋ ಗೊತ್ತಿಲ್ಲ. ಹೀಗಿರುವಾಗ, ಇಂಥಾ ಉದಾತ್ತ ತತ್ವವನ್ನು ನಾವು ಒಪ್ಪಿ, ಚಾಕಟ್ಟಿನೊಳಗೆ ಕೆಲಸಮಾಡುವುದಕ್ಕೆ ಹೊರಟ ಮೇಲೆ ನಾವು ಟೀಕೆ ಮಾಡುವುದು ಬೇರೆ ವಿಚಾರ. ಟೀಕೆ ಮಾಡಿದರೂ ನಮ್ಮ ಮಾತಿನಂತೆ ದೇಶದಲ್ಲಿ ವಿಚಾರ ನಡೆಯುತ್ತಾ ಇಲ್ಲ ಎಂದು ಹೇಳಿದಾಗ, ಅದರ ಬಗ್ಗೆ ರಾಗ ದ್ವೇಷಗಳಿಂದ ಕೂಡಿ, ಅಕ್ಕೋಶದಿಂದ ಕೂಡಿ ಮಾತನಾಡುವುದಾಗಲೀ ಅಥವಾ ನಮ್ಮ ಭಾವನೆಯನ್ನು ಕಟುವಾಗಿ ವ್ಯಕ್ತಪಡಿಸಿ, ಜನತೆಯಲ್ಲಿ ಉದ್ರೇಕ ಉಂಟಾಗುವ ರೀತಿಯಲ್ಲಿ ನಡೆದರೆ, ಅದು ವಾತಾವರಣ ಕಲುಷಿತ ಮಾಡುವುದಕ್ಕೆ ಪ್ರಥಮ ಸೋಪಾನವಾಗುತ್ತದೆ. ಇಂತಹ ಒಂದು ಪಾಠವನ್ನು ನಾವೆಲ್ಲರೂ ಚೆನ್ನಾಗಿ ಅಭ್ಯಾಸ ಮಾಡಬೇಕು, ಮತ್ತೆ ತಿಳಿಯಬೇಕಾದ್ದು ಇದೆ. ನಮ್ಮ ವಾತಾವರಣದಿಂದಲೂ, ನಮ್ಮ ಮಾತಿನಿಂದಲೂ ನಮ್ಮ ಕೋಪತಾಪಗಳನ್ನು ಯಾವ ಒಂದು ರೀತಿಯಲ್ಲಿ ಪ್ರದರ್ಶನ ಮಾಡಬೇಕೋ ಅದನ್ನು ಮಿತಿಮೀರಿ ಹೋಗಿ ಪ್ರದರ್ಶನ ಮಾಡುವುದರಿಂದ ಕಾಲಾನುಕ್ರಮೇಣ ಉದ್ರೇಕ ವಾತಾವರಣ ಬೆಳೆದು ಅದರ ಪರಿಣಾಮ ನೆನ್ನೆ ನಡೆದಂಥ ಒಂದು ಘಟನೆಯಲ್ಲಿ ಪರ್ಯವಸನವಾಗುತ್ತದೆ ಇದು ಲೇಶಾಂಶವು ಅನುಮಾನ ಇಲ್ಲ ಎಂದು ಅರ್ಥವಾಗುತ್ತದೆ ಅಧ್ಯಕ್ಷರೆ, ಕೆಲವು ದಿವಸಗಳ ಹಿಂದೆ ನಡೆದ ದುರ್ಘಟನೆಯನ್ನು ಸಭೆಯ ಗಮನಕ್ಕೆ ತರುತ್ತೇನೆ. ಕೇಂದ್ರದ ಮಂತ್ರಿಯಾಗಿದ್ದ ಒಬ್ಬ ವ್ಯಕ್ತಿ ಇಂತಹ ಒಂದು ಹಿಂಸಾಕೃತ್ಯಕ್ಕೆ ತುತ್ತಾಗಿ ಸಾವಿಗೆ ಈಡಾದರು. ಹೀಗೆ ಯಾರು ನಮ್ಮ ರಾಜಕೀಯ ವಿರೋಧಿಗಳು ಇರುತ್ತಾರೆ ಅವರನ್ನು ನಾವು ಈ ಪ್ರಪಂಚದಿಂದ ದೂರ ಮಾಡತಕ್ಕ ಕೃತ್ಯದಲ್ಲಿ ತೊಡಗಿದ್ದರೆ, ಹೇಗೆ ? ಅಧಿಕಾರದಲ್ಲಿ ಇರುವವರು, ಇಲ್ಲವೆ ಇರುವವರು ಆಗಲಿ, ಯಾರೇ ಆಗಲಿ, ಪ್ರಜಾಸತ್ತೆಯಲ್ಲಿ ಕೆಲಸ ಮಾಡುವುದು ಹೇಗೆ ? ಎನ್ನುವ ಶಂಕೆ, ಭೀತಿ ಎಲ್ಲರಲ್ಲೂ ತಲೆದೋರುವುದು ಸಹಜ. ರಾಜಕೀಯದಲ್ಲಿ ಇರುವುದು ಒಂದು ದೊಡ್ಡ ಅಪಘಾತಕ್ಕೆ ಈಡಾಗುತ್ತೇವೆ ಎನ್ನುವ ಭೀತಿ ಬರುವಂಥ ವಾತಾವರಣ ನಮ್ಮ ದೇಶದಲ್ಲಿ ಉಂಟುಮಾಡಿಕೊಂಡರೆ ಯಾರು ಎಷ್ಟು ಅರೆಸ್ಟ್ ಮಾಡಿಕೊಂಡು ಹೇಳಿದರು ಪ್ರಜಾಸತ್ತೆ ಉಳಿಯುವುದು ಎಲ್ಲಿ. ಎರಡ್ನಾ ದೃಷ್ಟಿಯಿಂದ ಇಂತಹ ಒಂದು ಸನ್ನಿವೇಶ ನಮ್ಮ ದೇಶದಲ್ಲಿ ಉಂಟಾಗಿದ್ದನ್ನು ನೋಡಿ ನಾವು ಪುನರ್‌ಚಿಂತನೆ ಬಹಳ ಆಳವಾಗಿ ಮಾಡಬೇಕಾಗಿದೆ. ನಮ್ಮಲ್ಲಿರುವ ದೋಷ ಯೋಚನೆ ಮಾಡಬೇಕಾಗಿದೆ. ನಾವೆಲ್ಲರೂ ಕೂಡ ಇದರಲ್ಲಿ ಯಾವ ಒಂದು ಪಕ್ಷ ಪ್ರತಿಪಕ್ಷ, ರಾಜಕೀಯ ಪಕ್ಷ, ಎಂಬ ಬೇಧಭಾವ ಬರುವುದಿಲ್ಲ. ಈ ಮೂಲ ತತ್ವದಲ್ಲಿ ಎಲ್ಲರೂ ಒಂದೇ ಇದ್ದೇವೆ ಎಂದು ನನ್ನ ಪೂರ್ಣ ನಂಬಿಕೆ. ಈ ಮೂಲ ತತ್ವವನ್ನು ನಾವು ಪ್ರಬಲವಾಗಿ ಬೆಳೆಸಬೇಕಾದ್ದು ಇದೆ, ಆ ಒಂದು ದೃಷ್ಟಿಯಿಂದ ಈ ಒಂದು ನಿರ್ಣಯ ಮಾಡತಕ್ಕದ್ದು. ನಾವೇ ಒಂದು ಸಂಕಲ್ಪ ಮಾಡಿದಹಾಗೆ ಮಾಡಿಕೊಂಡು ಜನತೆಯಲ್ಲಿ ಬಾಪಿ ಪ್ರಪಂಚದಲ್ಲೂ ಕೂಡ ಈ ಒಂದು ವಾತಾವರಣ ಬೆಳೆಯಬಾರದು, ಅದಕ್ಕೆ ನಾವೆಲ್ಲರೂ ಒಕ್ಕೊರಲಿನಿಂದ ಖಂಡನೀಯ ಎಂದು ಹೇಳಬೇಕು. ನಿಜವಾದ ಮೂಲ ತತ್ವ ಏನು ಇದೆ ಅದನ್ನು ಪ್ರತಿಪಾದನೆ ಮಾಡಬೇಕು. ಆ ಒಂದು ದೃಷ್ಟಿಯಿಂದ ಈ ನಿರ್ಣಯವನ

ನಾನು ಮಾನ್ಯ ಸಭೆಯ ಮುಂದಿಟ್ಟಿದ್ದೇನೆ. ಇದನ್ನು ನಾವೆಲ್ಲರೂ ಸರ್ವಾನುಮತದಿಂದ ಅನು ಮೋದಿಸಬೇಕು ಎಂದು ಹೇಳಿ ನಮ್ಮ ಎರ್ರಾ ಮಾನ್ಯ ಸದಸ್ಯರಿಗೂ ತಮ್ಮ ಮುಖಾಂತರ ಪ್ರಾರ್ಥನೆ ಸಲ್ಲಿಸುತ್ತೇನೆ.

† ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷಣಿಯವರೆ, ಏನು ಸಭಾನಾಯಕರು ಈ ಸಭೆಯಮುಂದೆ ಮಂಡಿಸಿರತಕ್ಕ ನಿರ್ಣಯ ಇದೆ. ಈ ನಿರ್ಣಯಕ್ಕೆ ನನ್ನ ಬೆಂಬಲವನ್ನು ಸೂಚಿಸ ತಕ್ಕಂಥ ಸನ್ನಿವೇಶದಲ್ಲಿ ಮುಖ್ಯಮಂತ್ರಿಗಳು ಒಂದು ಮಾತನ್ನು ಒತ್ತಿ ಹೇಳಿದರು. ಪ್ರಜಾಪ್ರಭುತ್ವ ದಲ್ಲಿ ವಿಶ್ವಾಸ ಇರತಕ್ಕ ಎರ್ರಾ ವ್ಯಕ್ತಿಗಳು, ಎರ್ರಾ ರಾಜಕೀಯ ಪಕ್ಷಗಳು ಕೂಡ ಇದಕ್ಕೆ ಬೆಂಬಲ ಸೂಚಿಸತಕ್ಕಂಥಾದ್ದು, ಒಪ್ಪತಕ್ಕಂಥಾದ್ದು, ಅದ್ಯ ಕರ್ತವ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಇವೊತ್ತು ರಾಜಕಾರಣದಲ್ಲಿ ತತ್ವಬೇಧ ಇರಬಹುದು, ಆದರೆ ವ್ಯಕ್ತಿ ದ್ವೇಷವಂತೂ ಇಲ್ಲ ಎಂದು ಸ್ಪಷ್ಟೀಕರಣ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ನಾನು ಪ್ರಧಾನಮಂತ್ರಿಗಳನ್ನು ಅನೇಕ ಸಾರಿ ಹೆಚ್ಚು ಕಡಿಮೆ ಟೀಕೆ ಮಾಡಿದ್ದೇನೆ. ಅವರು ಸಭೆಯ ವ್ಯಾಪ್ತಿಗೆ ಸಂಬಂಧ ಇಲ್ಲದೇ ಇದ್ದರೂ ಕೂಡ ಕೆಲವು ತತ್ವಗಳ ಆಧಾರದ ಮೇಲೆ ಟೀಕೆ ಮಾಡಿರಬಹುದು, ಇಂತಹ ಸನ್ನಿವೇಶದಲ್ಲಿ ಇಲ್ಲ ಎನ್ನುವುದನ್ನು ವ್ಯಕ್ತ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ರಾಜಕಾರಣದಲ್ಲಿ, ಯಾವುದೇ ಪಕ್ಷನೆನ್ನಲ್ಲಿ ಯಾವುದೇ ಅಂತಸ್ತಿನಲ್ಲಿ ಕೆಲಸ ಮಾಡತಕ್ಕ ವ್ಯಕ್ತಿಯಾಗಿರಲಿ, ಒಬ್ಬ ಸಾಮಾನ್ಯನಾಗಿರಲಿ, ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದವನಾಗಿರಲಿ, ನಿರ್ಭಯದಿಂದ ಕೆಲಸಮಾಡತಕ್ಕ ವಾತಾವರಣ ಈ ರಾಷ್ಟ್ರ ದಲ್ಲಿ ಮಾಡತಕ್ಕಂಥಾದ್ದು ಪ್ರತಿಯೊಬ್ಬನ ಜವಾಬ್ದಾರಿ ಎಂದು ನಾನು ಅರಿತಿದ್ದೇನೆ. ಇವೊತ್ತು ಒಂದು ಮಾತನ್ನು ಹೇಳಿದರೆ ಅನ್ಯಥಾ ಭಾವನೆ ಮಾಡಬಾರದು, ನಮ್ಮಲ್ಲಿ ಯಾವ ಮೌಲ್ಯಗಳನ್ನು ಉಳಿಸಿ ಬೆಳೆಸಿಕೊಂಡು ಬಂದಿದ್ದೇವೆ. ಅವುಗಳಿಗೆ ತಿರಾಜಲಿ ಕೊಡುವ ರೀತಿಯಲ್ಲಿ ಘಟನೆಗಳು ರಾಷ್ಟ್ರದಲ್ಲಿ ನಡೆಯುತಾ ಇರತಕ್ಕದ್ದು, ಇಂತಹ ದುಶ್ಯಕ್ತಿಗಳಿಗೆ ತಲೆ ಎತ್ತಿ ಬೆಳೆಯಲಿಕ್ಕೆ ಅವಕಾಶ ಕೊಟ್ಟಿದೆ ಎಂದು ಹೇಳಿದರೆ ತಪ್ಪಾಗಲಾರದು. ಈ ರಾಷ್ಟ್ರದಲ್ಲಿ ಒಳ್ಳೆಯ ಮೌಲ್ಯಗಳನ್ನು ಬೆಳೆಸಿ ಕೊಂಡು ಬರತಕ್ಕದ್ದರಲ್ಲಿ ಪ್ರತಿಯೊಬ್ಬರೂ ಕೂಡ ಭಾಗಿಗಳಾಗಬೇಕಾಗುತ್ತದೆ, ನೆರವಾಗಬೇಕಾ ಗುತ್ತದೆ. ಆ ದೃಷ್ಟಿಕೋನದಿಂದ ಈ ಮಾತನ್ನು ಹೇಳುತ್ತೇನೆ. ನೆನ್ನೆ ನಡೆದಂಥ ಘಟನೆ ಬಹಳ ಹೇಯವಾದುದು, ನಮ್ಮ ಸಂಸ್ಕೃತಿಗೆ ಯಾವುದೇ ರೀತಿಯ ಗೌರವ ತರತಕ್ಕದ್ದು ಅಲ್ಲ, ಭಾರತ ಸಂಸ್ಕೃತಿಗೆ ಗೌರವ ತರತಕ್ಕದ್ದು ಅಲ್ಲ, ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡು ತ್ತೇನೆ. ಮತ್ತೊಂದು ವಿಷಯ ಅದರಲ್ಲಿ The people who are in authority must take more procautions to curb this type of hooliganism. ಈ ಮಾತನ್ನು ಹೇಳುವಾಗ ಇವೊತ್ತು ಯಾವ ಸನ್ನಿವೇಶದಲ್ಲಾಗಲಿ, ಇದಕ್ಕೆ ಅವಕಾಶ ಕೊಡಬಾರದು ಅಧಿಕಾರದಲ್ಲಿರತಕ್ಕವರು ಅದರಲ್ಲೂ ಒಂದು ಸ್ವಲ್ಪ ಇದರಲ್ಲಿ ಸಡಿಲ ತೋರಿಸಿದರೆ ಇಂತಹ ಘಟನೆ ಗಳಾಗುವುದಕ್ಕೆ ಅವಕಾಶವಾಗುತ್ತದೆ. ಕೆಲವು ಉದಾಹರಣೆಗಳನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಬಲ್ಲೆ ಆದರೆ ಈ ಒಂದು ಸನ್ನಿವೇಶದಲ್ಲಿ ಹೋಗುವುದಿಲ್ಲ. ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರು, ಅವರು ಅಧಿಕಾರದಲ್ಲಿ ಇರಲಿ, ಪಕ್ಷದ ಕಾರ್ಯಕರ್ತರು ಆಗಿರಲಿ ಯಾವುದೇ ಸನ್ನಿವೇಶದಲ್ಲಿ ಇರಲಿ ಅವರ ಮೇಲೆ ಹತ್ಯಾಚಾರ ಇಂತಹ ಕೆಟ್ಟ ಪ್ರವೃತ್ತಿ, ಘಟನೆ ನೋಡಿ ದಾಗ ಪ್ರಧಾನಮಂತ್ರಿಗಳಾಗಿರಲಿ, ಮುಖ್ಯಮಂತ್ರಿಗಳಾಗಲಿ, ಯಾರೇ ಆಗಿರಲಿ ಅದನ್ನು ಅರಿತು ಕೊಂಡು ನಡೆದುಕೊಳ್ಳಬೇಕು. ಹಿಂದೆ ಎರ್ರಾ ಘಟನೆಗಳನ್ನು ಸ್ಮರಿಸಿಕೊಂಡು ಮಾತನಾಡಲಿಕ್ಕೆ ಹೋದರೆ, ಈ ಸಂದರ್ಭಕ್ಕೆ ತಕ್ಕಂಥ ಸನ್ನಿವೇಶವಾಗಲಾರದು. ಎಂದು ಅದನ್ನು ಮೊಟಕು ಮಾಡಿ, ರಾಷ್ಟ್ರದ ಪ್ರಧಾನ ಮಂತ್ರಿಗಳ ಜೀವದ ಮೇಲೆ ಅಕೃತ್ಯ ಎನಗತಕ್ಕ ಸನ್ನಿವೇಶ ಜರುಗ ಲಿಕ್ಕೆ ಅವಕಾಶ ಆಗಿದ್ದು, ರೇಡಿಯೋದಲ್ಲಿ ಕೇಳಿದಮೇಲೆ, ಮತ್ತು ಪತ್ರಿಕೆಯಲ್ಲಿ ಒದಿದಮೇಲೆ ನನ್ನ ಮನಸ್ಸಿಗೆ ಅಷ್ಟೇ ಆಘಾತವಾಗಿದೆ ಎಂದು ಇಷ್ಟು ಮಾತ್ರ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಲ್ಲಿ ಕುಳಿತಿರತಕ್ಕ ಯಾವುದೇ ರಾಜಕೀಯ ಪಕ್ಷ ಇರಲಿ, ರಾಷ್ಟ್ರದ ಪ್ರಧಾನಿಯವರಿಗೆ ಇಂತಹ ಘಟನೆ ಜರುಗತಕ್ಕದ್ದು ಕೇಳಿ ವಿಸ್ಮಯಗೊಂಡಿದ್ದೇವೆ. ಇವೊತ್ತು ಮುಖ್ಯಮಂತ್ರಿಗಳು ಸಭೆಯ ಮುಂದೆ ಇಟ್ಟಿರತಕ್ಕ ಸೂಚನೆಯನ್ನು ಅನುಮೋದಿಸಿ ರಾಷ್ಟ್ರದಲ್ಲಿ ಇಂತಂಥ ಸನ್ನಿವೇಶದಲ್ಲಿ ವ್ಯಕ್ತಿದ್ವೇಶದಿಂದ ಕೆಳಮಟ್ಟಕ್ಕೆ ಇಳಿಸಬಾರದು. ಪ್ರಜಾಪ್ರಭುತ್ವ ಉಳಿಸಿ, ಬೆಳೆಸಿ, ಪ್ರತಿಯೊಬ್ಬರು ಕರ್ತವ್ಯ ಮಾರ್ಗ ಬಿಟ್ಟರೆ ರಾಷ್ಟ್ರಕ್ಕೆ ಬೇರೆ ಕಲ್ಯಾಣ ಮಾರ್ಗ ಇಲ್ಲ. ಈ ಮಾರ್ಗ ಬಿಟ್ಟು ಬೇರೆ ಮಾರ್ಗ ಅನ್ವಯಿಸುತ್ತದೆಯೇ, ಹೊಸ ಮಾರ್ಗ ತಿಳಿದು ಪ್ರಜಾಪ್ರಭುತ್ವವನ್ನು ರಕ್ಷಿಸುವುದಕ್ಕೆ ಪ್ರತಿ ಯೊಬ್ಬರು ಕಾಯ ವಾಚ ಮನಸಾ ಪ್ರಯತ್ನ ಮಾಡಬೇಕು, ಈಗ ಹೇಳುವುದು ಒಂದು ಮಾಡು ವುದು ಒಂದು. ನಮ್ಮ ನಡೆ, ನುಡಿ ಎಲ್ಲವನ್ನು ಆಳವಾಗಿ ಆಲೋಚನೆ ಮಾಡಿದಾಗ, ಅದರ ಬಗ್ಗೆ ಬೇರೆ ಸಂದರ್ಭ ಬಂದಾಗ ಮಾತನಾಡುತ್ತೇನೆ. ಈಗ ಇಷ್ಟುಮಾತ್ರ ಹೇಳುತ್ತೇನೆ ಪ್ರಧಾನಮಂತ್ರಿ

ಾಗಲಿ, ರಾಷ್ಟ್ರದ ಯಾವುದೇ ಸೆಕ್ಷನ್‌ನಲ್ಲಿ ಕೆಲಸಮಾಡತಕ್ಕ ವ್ಯಕ್ತಿಯಾಗಲಿ, ರಾಜಕೀಯ ಪಕ್ಷಗಳಲ್ಲಿ ಇರತಕ್ಕ ಎಲ್ಲಾ ಕಾರ್ಯಕರ್ತರನ್ನು ಒಳಗೊಂಡು ಹೇಳುತ್ತೇನೆ. ಯಾವುದೇ ಒಂದು ಭಯ ಭೀತಿ ಇಲ್ಲದೆ ಕೆಲಸ ಮಾಡತಕ್ಕ ವಾತಾವರಣ ರಾಷ್ಟ್ರದಲ್ಲಿ ನಿರ್ಮಾಣವಾಗುವುದಕ್ಕೆ ನಾವೆಲ್ಲರೂ ಧ್ವನಿಗೊಟ್ಟು ಸಹಕರಿಸಿ ಶ್ರಮಿಸೋಣ. ಎನ್ನುವ ಆಶಯವನ್ನು ವ್ಯಕ್ತಪಡಿಸಿ ಈ ಒಂದು ಘಟನೆಯ ಉದ್ವೇಗದ ತೀವ್ರತೆಯನ್ನು ಖಂಡಿಸಿ, ಮಾನ್ಯ ಮುಖ್ಯ ಮಂತ್ರಿಗಳ ಸೂಚನೆಗೆ ಬೆಂಬಲ ಕೊಡುತ್ತೇನೆ ಎಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ). –ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರತಕ್ಕ ಈ ನಿರ್ಣಯವನ್ನು ನಾನು ನನ್ನ ಪಕ್ಷವಾದಂಥ ಸೋಷಲಿಸ್ಟ್ ಪಕ್ಷದ ವತಿಯಿಂದ ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ ಮತ್ತು ಸಂಪೂರ್ಣವಾದ ಬೆಂಬಲವನ್ನು ಕೊಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಈ ನಿರ್ಣಯದ ಬಗ್ಗೆ ಮಾತನಾಡುವಾಗ ಪ್ರಜಾಪ್ರಭುತ್ವದ ಮೂಲಭೂತ ವಿಷಯದ ಬಗ್ಗೆ ಬಹಳ ಚೆನ್ನಾಗಿ ಕೇಳಿದ್ದಾರೆ. ನಾನು ಸೋಷಲಿಸ್ಟ್ ಪಕ್ಷದವನು, ಲೋಹಿಯಾವಾದಿ, ಅಹಿಂಸಾವಾದಿ. ಆದುದರಿಂದ ಅಹಿಂಸೆಯಲ್ಲಿ, ಪ್ರಜಾ ಪ್ರಭುತ್ವದಲ್ಲಿ ಸಂಪೂರ್ಣವಾದ ನಿಷ್ಠೆ, ಪ್ರಾಮಾಣಿಕವಾದ ನಿಷ್ಠೆ ಇರತಕ್ಕಂಥ ಜನ ನಾವು. ಯಾವುದೇ ಸಮಯದಲ್ಲಿ, ಎಂಥದೇ ಒತ್ತಡದಿಂದ ಹಿಂಸೆ ಸಾರ್ವಜನಿಕವಾಗಿ ಅಥವಾ ವೈಯಕ್ತಿಕವಾಗಿ ಯಾರ ಮೇಲೂ ಆಗಬಾರದು ಎನ್ನುವುದರಲ್ಲಿ ಸಂಪೂರ್ಣವಾಗಿ ವಿಶ್ವಾಸ ಇರತಕ್ಕವರು ನಾವು. ದಿವಂಗತ ಡಾ. ರಾಮಮನೋಹರ ಲೋಹಿಯಾ, ಅವರು ಪಂಡಿತ ಪ್ರಧಾನ ಮಂತ್ರಿ ಜವಹರ್‌ಲಾಲ್ ನೆಹರುವರು ಇದ್ದಾಗ, ಅವರ ಎದುರಿನಲ್ಲಿ ಮಾತನಾಡುವಾಗ ಬಹುಶಃ ಈಗ ನಮ್ಮ ಸಂಸದೀಯ ಸಚಿವರಾಗಿರತಕ್ಕ; ಪಾರ್ಲಿಮೆಂಟ್ ಸದಸ್ಯರಾಗಿದ್ದ ಶ್ರೀಮಾನ್ ಕೃಷ್ಣ ಅವರು ಇದ್ದರು ಎಂದು ಕಾಣುತ್ತದೆ. ಅವರು ಹೇಳಿದ ಮಾತು ನೆನಪಿಗೆ ಬರುತ್ತಾ ಇದೆ. 'ಕೊರೆ ಆಗಬಾರದು, ಕೊರೆ ಬಹಳ ಕೆಟ್ಟದ್ದು, ಹಿಂಸೆ ಬಹಳ ಕೆಟ್ಟದ್ದು, ಕೊರೆ ಪಾತಕನ ಕೈಯಾರ ಕುತ್ತಿಗೆಗೆ ಬರುತ್ತೋ ಅದನ್ನು ನಿರೀಕ್ಷಿಸಲಕ್ಕೆ ಸಾಧ್ಯವಿಲ್ಲ. ಆದುದರಿಂದ ಕೊರೆ ಹಿಂಸೆ ದೌರ್ಜನ್ಯ ಇವು ಆಗದಂಥ ನೋಡಿಕೊಳ್ಳಬೇಕು ಎನ್ನುವ ಮಾತನ್ನು ಹೇಳಿದರು. ಅವನ್ನು ನಾನು ಸಮರ್ಥಿಸುತ್ತೇನೆ ಹೀಗೆ ವಾತಾವರಣವನ್ನು ಕಲುಷಿತಗೊಳಿಸುವುದಕ್ಕೆ ಯಾರೇ ಆಗಲಿ ಯಾಂಟು ಮಾಡಬಾರದು. ಪ್ರಜಾಪ್ರಭುತ್ವವನ್ನು ಭದ್ರಪಡಿಸುವಂಥ, ಅದರಲ್ಲಿ ಅಚಲವಾದ ವಿಶ್ವಾಸವನ್ನು ನಂಬಿಕೆಯನ್ನು ಬೇರೂರಿಸತಕ್ಕಂಥ ಏನಾದರೂ ವಾತಾವರಣ ಯಾಂಟಾದರೆ, ಅಥವಾ ಪ್ರಯತ್ನ ನಡೆದರೆ ಅದನ್ನು ನಾವೆಲ್ಲರೂ ಸ್ವಾಗತ ಮಾಡುತ್ತೇವೆ; ಹಿಂಸೆಗೆ ಅವಕಾಶ ಕೊಡಬಾರದು. ಉದಾಹರಣೆಗೆ ಹೇಳ ಬೇಕಾದರೆ, ಪ್ರಜಾಪ್ರಭುತ್ವ ಮತ್ತು ಸಮಾನ್ಯತವಾದಂಥ ಪದ್ಧತಿಯನ್ನು ಉಳಿಸುವುದಕ್ಕೆ, ಬೆಳೆಸುವುದಕ್ಕೆ ಗಾಂಧಿ ಮಾರ್ಗಕ್ಕಿಂತಲೂ ಶ್ರೇಷ್ಠವಾದಂಥಾದ್ದು ಭೂಲೋಕದಲ್ಲಿ ನಮಗೆ ಯಾವುದೂ ಕಂಡು ಬಂದಿಲ್ಲ. ಅಧಿಕಾರದಲ್ಲಿರುವವರು ಯಾರಾದರೂ ತಪ್ಪು ಮಾಡಿದರೆ ಅಥವಾ ಅನ್ಯಾಯಕ್ಕೆ ಅವಕಾಶ ಮಾಡಿದರೆ ಅದರ ವಿರುದ್ಧ ಸತ್ಯಾಗ್ರಹದಿಂದ ಶಾಂತಿಯುತವಾಗಿ ಚಳುವಳಿಗಳನ್ನು ನಡೆಸತಕ್ಕಂಥಾದ್ದು ಗಾಂಧೀ ಮಾರ್ಗದ ಮೊದಲನೇ ಪಾಠ. ಹಿಂಸೆ ವಿರುದ್ಧ ಕೂಡ ನಾವು ಹೋರಾಟ ನಡೆಸಬೇಕಾಗಿ ಬಂದರೆ, ನಡೆಸಿ, ಅದನ್ನು ಸರಿಪಡಿಸಿ, ಪ್ರಜಾಪ್ರಭುತ್ವವನ್ನು ಬೆಳೆಸುವುದಕ್ಕೆ ನಾವೆಲ್ಲ ಶ್ರಮಿಸಬೇಕು ಎಂದು ಹೇಳಿ, ಮಾನ್ಯ ಮುಖ್ಯ ಮಂತ್ರಿಗಳು ತಂದಿರತಕ್ಕ ನಿರ್ಣಯಕ್ಕೆ ನಮ್ಮ ಪಕ್ಷದ ವತಿಯಿಂದ ಸಂಪೂರ್ಣವಾದ ಬೆಂಬಲವನ್ನು ಸೂಚಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ತಂದಿರುವ ನಿರ್ಣಯಕ್ಕೆ ಪೂರ್ಣ ಬೆಂಬಲವನ್ನು ಸೂಚಿಸಲಿಕ್ಕೆ ಇಷ್ಟ ಪಡುತ್ತೇನೆ. ಇದರಲ್ಲಿ ಎರಡು ಮುಖ್ಯವಾದ ವಿಷಯಗಳಿವೆ, ಯಾರೇ ಆಗಲಿ, ಎಷ್ಟು ದೊಡ್ಡವರೇ ಆಗಲಿ; ಕಾನೂನಿನ ಚೌಕಟ್ಟಿನಲ್ಲಿ ಒಳಪಟ್ಟಿರುತ್ತಾರೆ ಎನ್ನುವುದು ಒಂದು, ಇನ್ನೊಂದು ಪ್ರಜಾಪ್ರಭುತ್ವಕ್ಕೆ ಅನುಗುಣವಾಗಿ ನಡೆಯಬೇಕು, ಹಿಂಸಾಚಾರ ಇರಕೂಡದು, ಕೊರೆ ಮಾರ್ಗದಿಂದ ಇತ್ಯರ್ಥ ಮಾಡುವುದಕ್ಕೆ ಆಗುವುದಿಲ್ಲ ಎನ್ನುವುದು ಇನ್ನೊಂದು ; ಈ ರೀತಿ ಒಪ್ಪಿಕೊಂಡಿರುವುದಾಗಿದೆ. ರಾಜಕೀಯ ಭಿನ್ನಾಭಿಪ್ರಾಯಗಳಿದ್ದಲ್ಲಿ ಪ್ರಜಾಪ್ರಭುತ್ವ ರೀತಿಯಲ್ಲಿ ಬಗೆಹರಿಸಬೇಕು ಎನ್ನುವುದನ್ನು ಒಪ್ಪಿಕೊಂಡಿದ್ದರೂ ಸಹ, ಈ ರೀತಿ ಹಿಂಸಾಚಾರ ನಡೆಸುವಂಥ ಶಕ್ತಿಗಳು ಅಥವಾ ಪ್ರಜಾಪ್ರಭುತ್ವಕ್ಕೆ ಕೊಡಲಪಟ್ಟು ಹಾಕಬೇಕು ಎನ್ನುವಂಥ ಶಕ್ತಿಗಳು ಬೆಳೆಯುತ್ತಾ ಇದ್ದರೆ ಅದರ ಬಗ್ಗೆ ಎಚ್ಚರಗೊಳ್ಳುವಂಥ ಜವಾಬ್ದಾರಿ ನಮ್ಮ ಮೇಲಿದೆ ಎಂದು ನನಗನಿಸುತ್ತದೆ ಮತ್ತು ಈ ರೀತಿಯಾಗಿ ಪ್ರಜಾಪ್ರಭುತ್ವಕ್ಕೆ ತಿಲಾಂಜಲಿ ಕೊಡಬೇಕು, ಕೊಡಲಪಟ್ಟು ಕೊಡಬೇಕು ಎನ್ನುವಂಥ ಶಕ್ತಿಗಳು ಬೆಳೆದರೆ, ಆ ಶಕ್ತಿ

ಗಳನ್ನು ಎದುರಿಸುವಂಥ ಧೈರ್ಯ ಹಾಗೂ ಎದೆಗಾರಿಕೆ ಸಹ ನಮಗೆ ಬರಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ವಿಷಯ ಏನೆಂದರೆ ಇದರ ಜೊತೆಯಲ್ಲಿ ಯೋಚನೆ ಮಾಡಬೇಕು. ಪ್ರಜಾಪ್ರಭುತ್ವಕ್ಕೆ ಕೊಲೆಡಹೆಟ್ಟು ಏತಕ್ಕೊಸ್ಕರ ಬೀಳುತ್ತದೆ, ಏಕೆ ಹೀಗಾಗುತ್ತದೆ, ಪರಿಸ್ಥಿತಿ ಏಕೆಹೀಗೆ ಆಗುತ್ತದೆ, ಇದಕ್ಕೆ ಯಾರು ಕಾರಣರು, ಯಾರು ಹೊಣೆಗಾರಿಕೆ ಎನ್ನುವುದನ್ನು ಕೂಡ ನಾವು ನೆನಸಿಕೊಳ್ಳಬೇಕಾಗಿದೆ. ಒಂದು ಸಂತೋಷದ ಏನೆಂದರೆ, ಆಗಂತುಕ ಪ್ರಧಾನಿಯವರ ಮೇಲೆ ಪಿನ್ನೂಲನ್ನು ಉಪಯೋಗಿಸಲಿಲ್ಲ. ಯಾರೋ ಡೆಟೆಕ್ಟ್ ಮಾಡಿದರು. ಬಹಳ ಸಂತೋಷ, ಅವರನ್ನು ಶ್ಲಾಘಿಸಬೇಕಾಗಿದೆ. ಒಂದು ವೇಳೆ ಅನಾಹುತವಾಗಿದ್ದರೆ ಅದಕ್ಕೆ ಯಾರು ಹೊಣೆಗಾರಿಕೆ ಎನ್ನುವುದನ್ನು ಕಂಡುಹಿಡಿಯುವ ಜವಾಬ್ದಾರಿ ಬರುತ್ತಿತ್ತು. ಇಂತಹ ದುಷ್ಟ ಶಕ್ತಿಗಳನ್ನು ಎದುರಿಸುವುದಕ್ಕೆ ಪಣ ತೊಡಬೇಕು ಎಂದು ಹೇಳಿ ಮಾನ್ಯ ಮುಖ್ಯ ಮಂತ್ರಿಗಳು ತಂದಿರುವ ನಿರ್ಣಯಕ್ಕೆ ನಾನು ಸಂಪೂರ್ಣವಾಗಿ ಬೆಂಬಲವನ್ನು ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

MADAM SPEAKER.—I also share the sentiments expressed by the Leader of the House and other hon. Members, I will put resolution to the votes of the House.

The question is:

"This House notes with great concern alarm the incident that occured in the Allahabad High Court when the Prime Minister appeared to give evidence in the election petition. The appearance of the Prime Minister before a *Court of Law once again establishes the majesty of the Rule of Law in the country* Incident of this nature is indicative of the symptoms of the cult of violence which is rising its ugly head in certain parts of the country. All parties regardless of their political complexion condemn such blatant acts and attempts of political violence."

The motion was adopted and the Resolution passed.

Resolution by Sri H.T. Krishnappa

re: **felicitating the victory og the Indian HoCkey Teom at the International Match.**

ಶ್ರೀ ಎಚ್.ಟಿ. ಕೃಷ್ಣಪ್ಪ.—ಭಾರತ ಹಾಕಿ ಟೀಮಿನವರು ವಿಶ್ವ ಹಾಕಿ ಸ್ಪರ್ಧೆಯಲ್ಲಿ ಗಳಿಸಿದ ವಿಜಯದ ಸಂಬಂಧವಾದ ಠರಾವನ್ನು ನಾನು ಮಂಡಿಸುತ್ತೇನೆ. ಅದು ಈ ರೀತಿ ಇದೆ:—

"ವಿಶ್ವ ಹಾಕಿ ಕಪ್ಪಿನ ಸ್ಪರ್ಧೆಯಲ್ಲಿ ಭಾರತದ ಹಾಕಿ ತಂಡ ಅದ್ಭುತವಾದ ವಿಜಯವನ್ನು ಸಾಧಿಸಿರುವುದಕ್ಕಾಗಿ ಈ ಸಭೆಯು ಭಾರತ ಹಾಕಿ ತಂಡವನ್ನು ಅಭಿನಂದಿಸುತ್ತದೆ."

Sri S.M. KRISHNA.—The entire House shares with joy the sentiments expressed by the Hon. Member.

MADAM SPEAKER.—I will put the resolution to the vote of the House.